**Government of Karnataka**
**Deposition Sheet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2019 |

ದಿನಾಂಕ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 1 ಫ್ರಾಸಾಃ 1

| | |
|---|---|
| ಹೆಸರು | ಕೇಶಪ್ಪ |
| ತಂದೆಯ ಹೆಸರು | ಗುರಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಢಾಂಬರ ಪ್ಯಾಕ್ಟ್ರಿಯಲ್ಲಿ ಕೆಲಸ |
| ವಾಸಸ್ಥಳ | ಪುಣೆ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ–2 ನನ್ನ ಹೆಂಡತಿ. ಚಾಸಾ–2 ರವರು ಬ್ಯೂಟಿ ಪಾರ್ಲ್‌ರ್ ನಡೆಸುತ್ತಿದ್ದರು. ಆರೋಪಿ ನನಗೆ ಪರಿಚಯ ಇಲ್ಲ. ದಿನಾಂಕ: 16–11–2018 ರಂದು ನನ್ನ ಹೆಂಡತಿ ಚಾಸಾ–2 ರವರು ಜೆರಾಕ್ಸ್ ಮಾಡಿಕೊಂಡು ಬರಲು ದೇವದುರ್ಗದ ಶಾಂತಿನಗರದ ಹತ್ತಿರ ಇದ್ದಾಗ ಆರೋಪಿ ಚಾಸಾ–2 ರವರನ್ನು ಅಪಹರಣ ಮಾಡಿಕೊಂಡು ಹೊಸಪೇಟೆಗೆ ಕರೆದುಕೊಂಡು ಹೋಗಿದ್ದನು. ಸುಮಾರು 15–20 ದಿನ ಚಾಸಾ–2 ರವರನ್ನು ಹೊಸಪೇಟೆಯಲ್ಲಿ ಇಟ್ಟುಕೊಂಡಿದ್ದನು. ನನಗೆ ಸಂಶಯ ಬಂತು ನಾನು ದಿನಾಂಕ: 08–12–2018 ರಂದು ದೂರು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ

ಪ್ರಾಸಾಃ 1

ಗುರುತಿರುತ್ತಾರೆ ದೂರನ್ನು ನಿ ಪಿ 1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

2. ದೂರು ಕೊಟ್ಟ ನಂತರ ಪೋಲಿಸರು ಪಂಚನಾಮೆ ಮಾಡಲು ದಿನಾಂಕ: 09-12-2018 ರಂದು ಶಾಂತಿನಗರದಲ್ಲಿರುವ ನಮ್ಮ ಮನೆಯ ಹತ್ತಿರ ಬಂದಿದ್ದರು. ಆ ಸಮಯದಲ್ಲಿ ಪಂಚ ಸಾಕ್ಷಿದಾರರಾಗಿ, ಚಾಸಾ-5 ಮತ್ತು 6 ರವರು ಇದ್ದರು. ನಂತರ ಆರೋಪಿಯ ದೂರವಾಣಿಗೆ ಕರೆ ಮಾಡಿದಾಗ ಮೊದಲು ಆರೋಪಿ ಸ್ಪಂದಿಸಲಿಲ್ಲ. ಆ ಮೇಲೆ ದೂರವಾಣಿಯಲ್ಲಿ ಮಾತನಾಡಿದಾಗ ನಾನು ದೂರು ಕೊಡುತ್ತೆನೆಂದು ಹೇಳಿದೆನು ನಂತರ ಪೋಲಿಸರು ದೂರವಾಣಿ ಕರೆ ಮಾಡಿದಾಗ, ಚಾಸಾ-2 ರವರು ಸಿಕ್ಕಿರುತ್ತಾರೆ. ನಂತರ ಆರೋಪಿಯನ್ನು ವಿಚಾರಿಸಿದಾಗ ಹೊಸಪೇಟೆಗೆ ಕರೆದುಕೊಂಡು ಹೋದ ವಿಚಾರ ಗೊತ್ತಾಗಿರುತ್ತದೆ. ಕೊಪ್ಪಳದಲ್ಲಿ ಚಾಸಾ-2 ರವರನ್ನು ಬಿಟ್ಟು ಹೋಗಿದ್ದು ಕೊಪ್ಪಳದಿಂದ ನಾನು ಕರೆದುಕೊಂಡು ಬಂದಿರುತ್ತೇನೆ. ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2019 |

ದಿನಾಂಕ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 3 ಫ್ರಾಸಾಃ 2

| | |
|---|---|
| ಹೆಸರು | ಲಲಿತಾ |
| ಗಂಡನ ಹೆಸರು | ಅಮರೇಶ |
| ವಯಸ್ಸು | 45 ವರ್ಷ |
| ಉದ್ಯೋಗ | ಅಂಗನವಾಡಿ ಕಾರ್ಯಕರ್ತೆ |
| ವಾಸಸ್ಥಳ | ಶಾಂತಿನಗರ ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಚಾಸಾ–1 ನನ್ನ ತಮ್ಮ ಚಾಸಾ–2 ನನ್ನ ಮಗಳು. ಸುಮಾರು 6 ವರ್ಷದ ಹಿಂದೆ ಅವರ ಲಗ್ನವಾಗಿರುತ್ತದೆ. ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಚಾಸಾ–2 ಮನೆಯಲ್ಲಿರುತ್ತಾರೆ ಸ್ಪಂದನ ಖಾಸಗಿ ಸಂಘದಲ್ಲಿ ಮನ ಎಯ ಆಜುಬಾಜುನವರು 50 ಸಾವಿರ ರೂಪಾಯಿ ಸಾಲವನ್ನು ಮಾಡಿದರು. ಚಾಸಾ–2 ರವರು 35 ಸಾವಿರ ರೂಪಾಯಿ ಸಾಲವನ್ನು ಮಾಡಿದರು. ಅಲ್ಲಿ ಕೆಲಸ ಮಾಡುವ ಮ್ಯಾನೇಜರ್ ಹೆಸರು ನಾಗರಾಜ. ಸುಮಾರು 5 ವರ್ಷದ ಹಿಂದೆ ಚಾಸಾ–2 ರವರು ಜಿರಾಕ್ಸ್ ಮಾಡಿಸಿಕೊಂಡು ಬರುವುದಾಗಿ ಹೇಳಿ ಹೋದವರು ಮನೆಗೆ ವಾಪಸ್ಸು ಬಂದಿರುವುದಿಲ್ಲ. ನಂತರ ನಾವು ನಮ್ಮ ಸಂಬಂಧಿಕರ

ಮನೆಯಲ್ಲಿ ಹುಡುಕಿದೆವು. ಚಾಸಾ-2 ರವರು ಸಿಕ್ಕಿರಲಿಲ್ಲ, ನಂತರ ಚಾಸಾ-2 ರವರು ಕಾಣೆಯಾಗಿದ್ದಾರೆಂದು ದೂರು ಕೊಟ್ಟಿರುತ್ತೇವೆ.

ದೂರು ಕೊಟ್ಟ ನಂತರ ಪೋಲಿಸರು ಮನೆಯ ಹತ್ತಿರ ಬಂದು ಪಂಚನಾಮೆ ಮಾಡಿಕೊಂಡು ಬಂದರು. ನಂತರ ಚಾಸಾ-2 ರವರು ಕೊಪ್ಪಳದಿಂದ ನಮಗೆ ಫೋನ್ ಮಾಡಿದರು. ಅವರಿಗೆ ಅರಾಮ ಇರಲಿಲ್ಲ. ನಂತರ ಅಲ್ಲಿಂದ ಅವರನ್ನು ಕರೆದುಕೊಂಡು ಬಂದು ಲಿಂಗಸೂಗೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು. ಚಾಸಾ-2 ರವರನ್ನು ವಿಚಾರಿಸಿದಾಗ ಅವರನ್ನು ಆರೋಪಿ 4-5 ದಿನ ಒಂದು ಪ್ರತ್ಯೇಕ ಮನೆಯ ರೂಂನಲ್ಲಿ ಇಟ್ಟಿದ್ದರು ಎಂದು ಹೇಳಿದರು. ಲಿಂಗಸೂಗೂರಿನಲ್ಲಿ ಚಿಕಿತ್ಸೆ ಕೊಡಿಸಿ ನಂತರ ಅವರನ್ನು ದೇವದುರ್ಗಕ್ಕೆ ವಾಪಸ್ಸು ಕರೆದುಕೊಂಡು ಬಂದಿರುತ್ತೇವೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ **ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 203/2019 |

ದಿನಾಂಕ 12-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 5 ಫ್ರಾಸಾಃ 3

| | |
|---|---|
| ಹೆಸರು | ಮಹಾಂತಪ್ಪ |
| ತಂದೆಯ ಹೆಸರು | ಭೋಜಪ್ಪ ರಾಠೋಡ್ |
| ವಯಸ್ಸು | 45 ವರ್ಷ |
| ಉದ್ಯೋಗ | ಹೊಲ ಮನೆ ಕೆಲಸ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಸಾಕ್ಷಿಯು ಪಂಚನಾಮೆಯಲ್ಲಿನ ತನಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿ ಪಿ 2 ಎಂದು ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ದಿನಾಂಕಃ 09-12-2018 ರಮದು ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ಚಾಸಾ-1 ರವರಿಗೆ ಸೇರಿದ ಮನೆಯ ಹತ್ತಿರ ಮಾಡಿರುತ್ತೇನೆ. ಚಾಸಾ-2 ರವರನ್ನು ಫೈನಾನ್ಸ್ ಮಾಡುವವರು ಅಪಹರಣ ಮಾಡಿದ ಬಗ್ಗೆ ಮಹಜರ ಮಾಡಿರುವುದಕ್ಕೆ ನನ್ನ ಸಹಿ ಮಾಡಿರುತ್ತೇನೆ. ಮಹಜರ ಮಾಡುವ ಕಾಲಕ್ಕೆ ನನ್ನ ಜೊತೆ ಚಾಸಾ-6 ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಟಿ ಎನ್ ವಕೀಲರಿಂದಃ**

1. ಪಂಚನಾಮೆ ಮಾಡುವ ಕಾಲಕ್ಕೆ ನಾನು ಚಾಸಾ-1 ರವರ ಮನೆಯ ಹತ್ತಿರ ಇದ್ದೇನು. ನಾನು ಆ ದಿನ ಚಾಸಾ-1 ರವರನ್ನು ಮಾತನಾಡಿಸಲು ಅವರ ಮನೆಯ ಹತ್ತಿರ ಹೋಗಿದ್ದೇನೆ. ಚಾಸಾ-1 ರವರ ಮನೆ ಶಾಂತಿನಗರದಲ್ಲಿ ಬರುತ್ತದೆ. ಚಾಸಾ-1 ರವರ ಮನೆ ನಂಬರ್ ಗೊತ್ತಿಲ್ಲ. ಚಾಸಾ-1 ರವರ ಮನೆಯ ಚಕ್‌ಬಂದಿ ಪೂರ್ವಕ್ಕೆ - ಪಶ್ಚಿಮಕ್ಕೆ - ಖಾಲಿ ಜಾಗ, ಉತ್ತರಕ್ಕೆ - ಖಾಲಿ ಜಾಗ ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ಚಾಸಾ-1 ರವರ ಮನೆಗೆ ಪೋಲಿಸರು ಬಂದಿದ್ದರು. ಮಹಜರ ಮಾಡುವ ಕಾಲಕ್ಕೆ ನಾನು ಚಾಸಾ-6 ಮತ್ತು 4-5 ಜನ ಇದ್ದೇವು ಅವರ ಹೆಸರು ನನಗೆ ಗೊತ್ತಿಲ್ಲ.

2. ಪಂಚನಾಮೆ ಮಾಡುವಾಗ ಪೋಲಿಸರು ಎಲ್ಲಿ ವಾಸ ಮಾಡುತ್ತಿದ್ದಾರೆ ಮತ್ತು ಅವರು ಎಲ್ಲಿ ಇದ್ದರು ಎಂದು ನನಗೆ ಮತ್ತು ಚಾಸಾ-6 ರವರೆಗೆ ವಿಚಾರಿಸಿದರು. ನಮ್ಮನ್ನು ಬಿಟ್ಟು ಬೇರೆಯವರಿಗೆ ವಿಚಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಮನೆಯ ಮುಂದೆ ಮಾಡಿದರು. ಪಂಚನಾಮೆಯಲ್ಲಿ ಏನೂ ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ ಆದರೆ ನನ್ನ ಮುಂದೆ ಬರೆದುಕೊಂಡಿರುತ್ತಾರೆ. ಚಾಸಾ-1 ರವರು ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಅವರು ನಮ್ಮೂರಿನವರು ಎನ್ನುತ್ತಾರೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನೀವು ಮತ್ತು ಚಾಸಾ-6 ರವರು ಇದ್ದೇವೆಂದು ಮತ್ತು ಸಹಿ ಮಾಡಿದ್ದೇವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ